# ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ
# ಹಗರಿಬೊಮ್ಮನಹಳ್ಳಿ.

**ಸಿ.ಸಿ.ಸಂಖ್ಯೆಃ 135/2021**

ಪಿರ್ಯಾದುದಾರರು : ರಾಜ್ಯದ ಪರವಾಗಿ ತಂಬ್ರಹಳ್ಳಿ ಪೊಲೀಸ್ ಠಾಣೆ

ವಿರುದ್ಧ

ಆರೋಪಿತರು : 1) ಸೋಮಪ್ಪ.ಯು. ಬಿನ್ ಬಸಪ್ಪ,
ವಯಸುಃ 58 ವರ್ಷ, ವೃತ್ತಿಃ ವ್ಯವಸಾಯ,
2) ಸದಾನಂದ.ಯು. ಬಿನ್ ಸೋಮಪ್ಪ.ಯು.
ವಯಸುಃ 28 ವರ್ಷ, ವೃತ್ತಿಃ ವ್ಯವಸಾಯ,
ಇಬ್ಬರೂ ವಾಸಃ ಕೊಡೇನಹಳ್ಳಿ ಗ್ರಾಮ,
ಹಗರಿಬೊಮ್ಮನಹಳ್ಳಿ ತಾಲ್ಲೂಕು, ವಿಜಯನಗರ ಜಿಲ್ಲೆ.

## ದೋಷಾರೋಪಣೆ

ಶ್ರೀಮತಿ ಭಾಗ್ಯಲಕ್ಷ್ಮಿ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ ಅದ ನಾನು 1 ಮತ್ತು 2 ನೇ ಆರೋಪಿತರಾದ ನಿಮ್ಮ ಮೇಲೆ ಹೊರಿಸುವ ದೋಷಾರೋಪಣೆ ಏನೆಂದರೆಃ

ದಿನಾಂಕಃ 27-11-2020 ರಂದು ಬೆಳಿಗ್ಗೆ 11-45 ಗಂಟೆ ಸುಮಾರಿಗೆ ತಂಬ್ರಹಳ್ಳಿ ಪೊಲೀಸ್ ಠಾಣಾ ಸರಹದ್ದಿನ ಕೊಂಡೇನಹಳ್ಳಿ ಗ್ರಾಮದಲ್ಲಿರುವ ಶ್ರೀ ಆಂಜನೇಯ ದೇವಸ್ಥಾನದ ಬಳಿ ಚಾಸಾ-4 ಮತ್ತು ಚಾಸಾ-5 ರವರು ನಿಂತುಕೊಂಡಿದ್ದಾಗ 1 ಮತ್ತು 2 ನೇ ಆರೋಪಿತರಾದ ನೀವು ಏಕೋದ್ದೇಶ ಹೊಂದಿ ಚಾಸಾ-1, 4, 5 ರವರ ಬಳಿ ಬಂದು ಏಕಾಏಕಿಯಾಗಿ ಲೇ ಸೂಳೆ ಮಕ್ಕಳಾ, ನೀವು ನಿಮ್ಮ ದೊಡ್ಡಪ್ಪನಾದ ಬಸವಂತನ ಹತ್ತಿರ ಆಸ್ತಿ ಹಂಚಲು ಕೇಳುತ್ತೀರೇನಲೇ ಅಂತಾ ಅವಾಚ್ಯಶಬ್ಧಗಳಿಂದ ನಿಂದಿಸಿ", ಉದ್ದೇಶಪೂರ್ವಕವಾಗಿ ಚಾಸಾ-1, 4, 5 ರವರಿಗೆ ಅವಮಾನ ಮಾಡಿ ಶಾಂತಿಭಂಗವುಂಟು ಮಾಡಿದ್ದರಿಂದ, 1 ಮತ್ತು 2 ನೇ ಆರೋಪಿತರಾದ ನೀವು ಭಾರತ ದಂಡ ಸಂಹಿತೆ ಕಲಂ.504 ಸಹವಾಚಕ ಕಲಂ.34 ರ ಅಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ನನ್ನ ಸಂಜ್ಞೆಯತೆಯಲ್ಲಿ ಎಸಗಿರುತ್ತೀರಿ ಎಂದು ಆಪಾದಿಸಲಾಗಿದೆ.

ಎರಡನೆಯದಾಗಿ ಅದೇ ದಿನ, ಸಮಯ ಹಾಗೂ ಸ್ಥಳದಲ್ಲಿ 1 ಮತ್ತು 2 ನೇ ಆರೋಪಿತರಾದ ನೀವು ಏಕೋದ್ದೇಶ ಹೊಂದಿ 1 ನೇ ಆರೋಪಿಯಾದ ನೀವು ಸ್ವ-ಇಚ್ಛೆಯಿಂದ ಕಟ್ಟಿಗೆಯನ್ನು ಮಾರಕ ಆಯುಧದಂತೆ ಬಳಸಿ ಅದರಿಂದ ಚಾಸಾ-1 ರವರ ಬಲಭುಜಕ್ಕೆ ಹೊಡೆದು

ಒಳಪೆಟ್ಟು ಮಾಡಿದ್ದು, ನಿಮ್ಮ ಬಾಯಿಯಿಂದ ಚಾಸಾ-4 ರವರ ಬಲಭುಜಕ್ಕೆ ಕಚ್ಚಿ ಗಾಯವನ್ನುಂಟು ಮಾಡಿದ್ದು ಮತ್ತು ಕಟ್ಟಿಗೆಯಿಂದ ಚಾಸಾ-5 ರವರ ಎಡಪಕ್ಕೆಗೆ ಹೊಡೆದು ಒಳಪೆಟ್ಟು ಮಾಡಿದ್ದು, ಹಾಗೂ 2 ನೇ ಆರೋಪಿಯಾದ ನೀವು ಸ್ವ-ಇಚ್ಛೆಯಿಂದ ಕಲ್ಲನ್ನು ಮಾರಕ ಆಯುಧದಂತೆ ಬಳಸಿ ಅದರಿಂದ ಚಾಸಾ-1 ರವರ ತಲೆಗೆ ಹೊಡೆದು ಗಾಯವನ್ನುಂಟು ಮಾಡಿದ್ದು, ಆದ್ದರಿಂದ 1 ಮತ್ತು 2 ನೇ ಆರೋಪಿತರಾದ ನೀವು ಭಾರತ ದಂಡ ಸಂಹಿತೆ ಕಲಂ.324 ಸಹವಾಚಕ ಕಲಂ.34 ರ ಅಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ನನ್ನ ಸಂಜ್ಞೆಯತೆಯಲ್ಲಿ ಎಸಗಿರುತ್ತೀರಿ ಎಂದು ಆಪಾದಿಸಲಾಗಿದೆ.

ಮೂರನೆಯದಾಗಿ ಅದೇ ದಿನ, ಸಮಯ ಹಾಗೂ ಸ್ಥಳದಲ್ಲಿ 1 ಮತ್ತು 2 ನೇ ಆರೋಪಿತರಾದ ನೀವು ಏಕೋದ್ದೇಶ ಹೊಂದಿ 2 ನೇ ಆರೋಪಿಯಾದ ನೀವು ಸ್ವ-ಇಚ್ಛೆಯಿಂದ ಚಾಸಾ-5 ರವರ ಕೈಯನ್ನು ತಿರುವಿ ಹೊಡಿ-ಬಡಿ ಮಾಡಿ ಸಾದಾ ಸ್ವರೂಪದ ಗಾಯವನ್ನುಂಟು ಮಾಡಿದ್ದು ಹಾಗೂ 1 ನೇ ಆರೋಪಿಯಾದ ನೀವು ಸ್ವ-ಇಚ್ಛೆಯಿಂದ ಚಾಸಾ-4 ರವರ ಬಲಭುಜಕ್ಕೆ ಕೈಯಿಂದ ಹೊಡಿ-ಬಡಿ ಮಾಡಿ ಸಾದಾ ಸ್ವರೂಪದ ಗಾಯಗಳನ್ನುಂಟು ಮಾಡಿದ್ದು, ಆದ್ದರಿಂದ 1 ಮತ್ತು 2 ನೇ ಆರೋಪಿತರಾದ ನೀವು ಭಾರತ ದಂಡ ಸಂಹಿತೆ ಕಲಂ.323 ಸಹವಾಚಕ ಕಲಂ.34 ರ ಅಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ನನ್ನ ಸಂಜ್ಞೆಯತೆಯಲ್ಲಿ ಎಸಗಿರುತ್ತೀರಿ ಎಂದು ಆಪಾದಿಸಲಾಗಿದೆ.

ನಾಲ್ಕನೆಯದಾಗಿ ಅದೇ ದಿನ, ಸಮಯ ಹಾಗೂ ಸ್ಥಳದಲ್ಲಿ 1 ಮತ್ತು 2 ನೇ ಆರೋಪಿತರಾದ ನೀವು ಏಕೋದ್ದೇಶ ಹೊಂದಿ ಚಾಸಾ-1, 4 ಮತ್ತು 5 ರವರಿಗೆ ಪ್ರಾಣ ಬೆದರಿಕೆ ಹಾಕಿ ಅಪರಾಧಿಕ ಭಯೋತ್ಪಾದನೆಯನ್ನು ಮಾಡಿದ್ದರಿಂದ 1 ಮತ್ತು 2 ನೇ ಆರೋಪಿತರಾದ ನೀವು ಭಾರತ ದಂಡ ಸಂಹಿತೆ ಕಲಂ.506 ಹಾಗೂ ಸಹವಾಚಕ ಕಲಂ.34 ರ ಅಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯತೆಯಲ್ಲಿ ಎಸಗಿರುತ್ತೀರಿ ಎಂದು ಆಪಾದಿಸಲಾಗಿದೆ.

1 ಮತ್ತು 2 ನೇ ಆರೋಪಿತರಾದ ನೀವು ಸದರಿ ಆರೋಪಗಳ ಮೇಲೆ ಈ ನ್ಯಾಯಾಲಯದಿಂದ ವಿಚಾರಣೆಗೆ ಗುರಿಯಾಗತಕ್ಕದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

1. 1 ನೇ ಆರೋಪಿಯಾದ ನಿಮಗೆ ಮೇಲ್ಕಂಡ ದೋಷಾರೋಪಣೆ ಓದಿ ಹೇಳಿದ್ದು ನಿಮಗೆ ಅರ್ಥವಾಯಿತೇ?

ಉತ್ತರಃ

2. 1 ನೇ ಆರೋಪಿಯಾದ ನೀವು ನಿಮ್ಮ ಸದರಿ ತಪ್ಪುಗಳನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ಆಗಬೇಕಾ?

ಉತ್ತರಃ

1. 2 ನೇ ಆರೋಪಿಯಾದ ನಿಮಗೆ ಮೇಲ್ಕಂಡ ದೋಷಾರೋಪಣೆ ಓದಿ ಹೇಳಿದ್ದು ನಿಮಗೆ ಅರ್ಥವಾಯಿತೇ?

ಉತ್ತರಃ

2. 2 ನೇ ಆರೋಪಿಯಾದ ನೀವು ನಿಮ್ಮ ಸದರಿ ತಪ್ಪುಗಳನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ಆಗಬೇಕಾ?

ಉತ್ತರಃ

ಸ್ಥಳಃ ಹಗರಿಬೊಮ್ಮನಹಳ್ಳಿ
ದಿನಾಂಕಃ 16-12-2021

ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾದಂ.,
ಹಗರಿಬೊಮ್ಮನಹಳ್ಳಿ .

**1** ನೇ ಆರೋಪಿ ಸಹಿಃ

**2** ನೇ ಆರೋಪಿ ಸಹಿಃ